ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2530
ಸದಸ್ಯರ ಹೆಸರು	:	ಶ್ರೀ ಚಿದಾನಂದ್ ಎಂ. ಗೌಡ (ಪದವೀಧರ ಕ್ಷೇತ್ರ)
ಉತ್ತರಿಸುವ ದಿನಾಂಕ	:	23-03-2022
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ರಾಷ್ಟ್ರೀಯ ಹೆದ್ದಾರಿ-48 ರಲ್ಲಿ ವಾಹನಗಳ ದಟ್ಟಣೆಯಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಷ್ಟ್ರೀಯ ಹೆದ್ದಾರಿ-4 (ಹೊಸ ನಂ.48) ಬೆಂಗಳೂರು - ಪುಣೆ ರಾಷ್ಟ್ರೀಯ ಹೆದ್ದಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದು, ರಾಜ್ಯದಲ್ಲಿ ಇದರ ಒಟ್ಟು ಉದ್ದ 589 ಕಿ.ಮೀ. ಇದರಲ್ಲಿ ಬೆಂಗಳೂರು- ನೆಲಮಂಗಲ ಭಾಗದ 29.5 ಕಿ.ಮೀ. ಉದ್ದದ ರಸ್ತೆ 6 ಪಥದ ರಸ್ತೆಯಾಗಿದ್ದು, ಬೆಂಗಳೂರು ಹತ್ತಿರ ಮೇಲ್ಸೇತುವೆಯ ದುರಸ್ತಿಯಿಂದ ತಾತ್ಕಾಲಿಕವಾಗಿ ಸಂಚಾರ ದಟ್ಟಣೆಯಾಗಿತ್ತು. ಈ ಸೇತುವೆಯ ಮೇಲೆ ಈಗ ಹಗುರ ವಾಹನಗಳಿಗೆ ಪ್ರವೇಶ ನೀಡಲಾಗಿದ್ದು, ವಾಹನದ ದಟ್ಟಣೆ ಕಡಿಮೆಯಾಗಿದೆ ಎಂದು NHAI ರವರು ವರದಿಸಿರುತ್ತಾರೆ. ರಾಷ್ಟ್ರೀಯ ಹೆದ್ದಾರಿ-48 ರ ನೆಲಮಂಗಲದಿಂದ - ತುಮಕೂರು ಭಾಗದ ರಸ್ತೆ 32.5 ಕಿ.ಮೀ. ಉದ್ದವಿದ್ದು, ಇದು ನಾಲ್ಕು ಪಥದ ರಸ್ತೆಯಾಗಿರುವುದರಿಂದ ವಾಹನ ದಟ್ಟಣೆ ಇದೆ. ಈ ಭಾಗದ ರಸ್ತೆಯನ್ನು 6 ಪಥದ ರಸ್ತೆಯನ್ನಾಗಿ ಅಗಲೀಕರಣಗೊಳಿಸುವ ಕಾಮಗಾರಿಯನ್ನು NHAI ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ. ಶೀಘ್ರವೇ ಕಾಮಗಾರಿ ಪ್ರಾರಂಭಿಸಲಾಗುವುದೆಂದು NHAI ರವರು ವರದಿಸಿರುತ್ತಾರೆ. ಉಳಿದಂತೆ ರಾಷ್ಟ್ರೀಯ ಹೆದ್ದಾರಿ-48 ರ ರಸ್ತೆಯ ಯಾವುದೇ ಭಾಗದಲ್ಲಿ ಸಂಚಾರ ದಟ್ಟಣೆ ಇರುವುದಿಲ್ಲ ಎಂದು NHAI ರವರು ವರದಿಸಿದ್ದಾರೆ.
ಆ.	ಸದರಿ ರಸ್ತೆಗೆ ಟೋಲ್ ಸಂಗ್ರಹಣಾ ಅವಧಿ ಯಾವಾಗ ಪ್ರಾರಂಭವಾಯಿತು; ಎಲ್ಲಿಯವರೆಗೆ ಟೋಲ್ ಸಂಗ್ರಹಣಾ ಅವಧಿ ಮುಂದುವರಿಯುವುದು;	ರಾಷ್ಟ್ರೀಯ ಹೆದ್ದಾರಿ-48 ರ ಬೆಂಗಳೂರು- ಪುಣೆ ರಸ್ತೆಯಲ್ಲಿ ಸ್ಥಾಪಿಸಲಾಗಿರುವ ಟೋಲ್ ಪ್ಲಾಜಾಗಳು ಪ್ರಾರಂಭವಾದ, ದಿನಾಂಕ ಮತ್ತು ಟೋಲ್ ಸಂಗ್ರಹಣಾ ಅವಧಿಯ ಮುಕ್ತಾಯವಾಗುವ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಇ.	ಸದರಿ ರಸ್ತೆಗೆ ಸರ್ವೀಸ್ ರಸ್ತೆ ನಿರ್ಮಿಸದಿರಲು ಕಾರಣವೇನು;	ರಾಷ್ಟ್ರೀಯ ಹೆದ್ದಾರಿ-48 ರ ಬೆಂಗಳೂರು-ನೆಲಮಂಗಲ ಭಾಗದ ರಸ್ತೆಯಲ್ಲಿ ಸರ್ವೀಸ್ ರಸ್ತೆ ನಿರ್ಮಿಸಲಾಗಿದೆ ಮತ್ತು ನೆಲಮಂಗಲ - ತುಮಕೂರು ಭಾಗದ ರಸ್ತೆಯಲ್ಲಿ ಕರಾರಿನಂತೆ ಸರ್ವೀಸ್ ರಸ್ತೆ ನಿರ್ಮಿಸಲಾಗಿದೆ. ಈ ಭಾಗದ ರಸ್ತೆಯನ್ನು 6 ಪಥದ ರಸ್ತೆಯನ್ನಾಗಿ ಉನ್ನತೀಕರಿಸಲಾಗುತ್ತಿದ್ದು, ಇದರಲ್ಲಿ ಸರ್ವೀಸ್ ರಸ್ತೆ ಅಳವಡಿಸಲಾಗಿದೆ ಎಂದು NHAI ರವರು ವರದಿಸಿರುತ್ತಾರೆ.

ಈ.	ಸದರಿ ರಸ್ತೆಯನ್ನು ಅಷ್ಟಪಥ ಅಥವಾ ದಶಪಥ ರಸ್ತೆಯನ್ನಾಗಿ ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗುವುದೇ? (ವಿವರ ಒದಗಿಸುವುದು)	ರಾಷ್ಟ್ರೀಯ ಹೆದ್ದಾರಿ-48 ರ ರಸ್ತೆಯನ್ನು ಅಷ್ಟಪಥ ಅಥವಾ ದಶಪಥ ರಸ್ತೆಯನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ ಎಂದು NHAI ವರದಿಸಿದ್ದಾರೆ.

ಕಡತ ಸಂಖ್ಯೆ: ಲೋಇ 116 ಸಿಎನ್‌ಹೆಚ್ 2022(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು

National Highways Authority of India
Regional Office-Bangalore ANNEXURE-1 TO starred LCQ-2530

Sl No.	PIU	Project Name	User fee plaza	Tollabel length	Starting date of toll collection	Closing date of toll collection	extension	Reason
1	Bangalore	Bangalore-Nelamangala	Towards Bangalore	19.5	30.04.2021	30.04.2022	-	
2			Towards Nelamangala					
3	Chitradurga	Nelamangala -Tumkur	Kulumepalya	32.5	09.02.2004	21.06.2021	474 days Extension	2 plazas Kulumepally and chokkenalli- tenure completed as on 20.07.2021 . Arbitrator has awarded 474 days of Extention of time. The same is challanged by NHAI in Honble high court of Delhi.
4			Chokkenahalli					
5			Karjeevanahalli	114	04.06.2011	03.06.2037	-	
6			Guilalu					
7		Chitradurga - Harihara	Hebbalu	72.7	02.03.2021	02.03.2022	extended upto deployment of New agency	
8		Harihara - Haveri	Chalagere	78.923	08.01.2021	08.01.2022	extended upto deployment of New agency	
9	Dharwad	Belgaum Maharastra border	Bankapur	22	08-01-2022	08-01-2023	-	
10			Hattargi					
11		Dharwad - Belgaum	Hiregabewadi	79.36	04.05.2011	03.05.2041		
12		Haveri-Hubli	Kognoli	64	17.12.2020	17-03-2022		
	Toll with National Highways Zone (PWD)							
1	Hubli-Dharwad	Hubli-Dharwad bypass on NH-4	Km 404.20 Gabbur	30.35	06.05.2000	05.05.2024		
2			Km 407.600 near Nekarnagar					
3			Km 414.600 Tarihal					
4			Km 421.00 Yerikoppa					
5			Km 429.800 Kelageri					
6			Km 433.800 Narendra					